**ಸಿ.ಸಿ ನಂ. 1087/2017** **ಪಿ.ಡಬ್ಲ್ಯೂ-1**

**ದಿನಾಂಕ 05/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಎಲ್.ಡಿ. ವಕೀಲರಿಂದ**

ನನ್ನದು ಮಾರನಾಯಕನಹಳ್ಳಿ ಆಗಿರುತ್ತದೆ. ಹೊಳೆನರಸೀಪುರದಿಂದ 12 ಕಿ.ಮೀ. ದೂರದಲ್ಲಿ ಸದರಿ ಊರು ಇದೆ. ನಾನು ವ್ಯವಸಾಯ ಮಾಡುತ್ತೇನೆ. ಎಲ್.ಐ.ಸಿ ಏಜೆಂಟ್ ಆಗಿಯೂ ಕೆಲಸ ಮಾಡುತ್ತೇನೆ. ಎಲ್.ಐ.ಸಿ ಏಜೆಂಟ್ ಆಗಿ ನಾನು ಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವರ್ಷದಲ್ಲಿ ಸುಮಾರು 50 ಎಲ್.ಐ.ಸಿ ಪಾಲಿಸಿಗಳನ್ನು ಮಾಡಿಸುತ್ತೇನೆ. ವ್ಯವಸಾಯದಿಂದ ನನಗೆ ವಾರ್ಷಿಕವಾಗಿ 6-7 ಲಕ್ಷ ರೂಪಾಯಿ ಆದಾಯ ಇದೆ. ನಾನು ಕಬ್ಬು, ತೆಂಗು, ಭತ್ತ ಮತ್ತು ರಾಗಿ ಬೆಳೆಯುತ್ತೇನೆ. ನನಗೆ ವ್ಯವಸಾಯದಿಂದ 6-7 ಲಕ್ಷ ರೂ. ಬರುತ್ತದೆ ಎನ್ನುವ ಸಲುವಾಗಿ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

2. ಎಲ್.ಐ.ಸಿ ಪಾಲಿಸಿಗಳು ಮಾಡಿಸುವುದರಿಂದ ನನಗೆ ತಿಂಗಳಿಗೆ 20 ರಿಂದ 25 ಸಾವಿರದಷ್ಟು ಆದಾಯ ಬರುತ್ತಿತ್ತು. ಈಗ ನಾನು ಎಲ್.ಐ.ಸಿ ಮಾಡಿಸುತ್ತಿಲ್ಲ ಎಂದು. ಎಲ್.ಐ.ಸಿ ಮಾಡಿಸುತ್ತಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

3. ಅಕಲಗೂಡು ತಾಲ್ಲೂಕು ಹೊಳಲುಗೂಡು ಊರಿನವರಾಗಿರುತ್ತಾರೆ. ಅರರಕಲಗೂಡಿನ ದಕ್ಷಿಣಕ್ಕೆ ಸದರಿ ಊರು ಬರುತ್ತದೆ. ಅರಕಲಗೂಡಿನಿಂದ ಹೊಳಲುಗೂಡು ಸುಮಾರು 15 ಕಿ.ಮೀ ದೂರದಲ್ಲಿರುತ್ತದೆ. ಆರೋಪಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಆರೋಪಿಯ ಹೆಂಡತಿಯೂ ಶಿಕ್ಷಕರಾಗಿದ್ದಾರೆ. 2014 ರ ಕಾಲಕ್ಕೆ ಆರೋಪಿ ಹೊಳಲುಗೂಡಿನಲ್ಲೇ ಕೆಲಸ ಮಾಡುತ್ತಿದ್ದರು. 2014 ರ ಕಾಲಕ್ಕೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನಮ್ಮ ಗ್ರಾಮದಿಂದ ಹೊಳಲುಗೂಡು 42 ಕಿ.ಮೀ. ಅಂತರದಲ್ಲಿದೆ. ಆರೋಪಿ ಅರಕಲಗೂಡು ತಾಲ್ಲೂಕಿನವರಾಗಿದ್ದು ನಾನು ಹೊಳೆನರಸೀಪುರ ಕಸಬಾ ಹೋಬಳಿ ಆಗಿರುವ ಕಾರಣ ಆರೋಪಿಯ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ. ಜಿ.ಬಿ.ಮಂಜುನಾಥ ಎನ್ನುವ ನನ್ನ ಸ್ನೇಹಿತ ಶಿಕ್ಷಕರಾಗಿದ್ದು ಅವರ ಮೂಲಕ ನನಗೆ ಆರೋಪಿಯ ಪರಿಚಯ ಆಗಿರುತ್ತದೆ. ಜಿ.ಬಿ.ಮಂಜುನಾಥ ರವರು ಆರೋಪಿಯ ಪಕ್ಕದ ಊರಿನಲ್ಲಿ ಶಿಕ್ಷಕರಾಗಿದ್ದು, ಅವರು ಯಾವ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೋ

ನಾನು ಈಗ ಮರೆತಿದ್ದೇನೆ. ಮಂಜುನಾಥ ರವರ ಸಹ ಶಿಕ್ಷಕರಾಗಿದ್ದರು ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ ನನಗೆ ಆರೋಪಿಯ ನೇರ ಪರಿಚಯ ಇಲ್ಲ ಎಂದರೆ ಸರಿ. ಆರೋಪಿಯ ಪರಿಚಯ ಇಲ್ಲದೇ ಇದ್ದರೂ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವ ಶಿಕ್ಷಕರಾಗಿದ್ದರೊ ಎಂದು ನನಗೆ ಗೊತ್ತಿಲ್ಲ. ನನಗೆ ಅರಕಲಗೂಡು ಮಲ್ಲಿಪಟ್ಟಣದ ಕಡೆ ಪರಿಚಯಸ್ಥರು ಇಲ್ಲ. ರಾಮಾನಾಥಪುರ, ಮಗ್ಗೆಯ ಕಡೆ ಇದ್ದಾರೆ,

**4.** ಆರೋಪಿ ಹಣ ಬೇಕೆಂದು **10.08.2014** ಕ್ಕೆ ನನ್ನನ್ನು ಭೇಟಿಯಾಗಿರುತ್ತಾರೆ. ಮಧ್ಯಾಹ್ನ ಸುಮಾರು **2** ಗಂಟೆ ಆಗಿರಬಹುದು. ಅದು ವಾರದ ಯಾವ ದಿನ ಎಂದು ನನಗೆ ಈಗ ನೆನಪಿಲ್ಲ. ಆರೋಪಿಯೇ ಬಂದು ನನ್ನನ್ನು ಭೇಟಿಯಾಗಿರುತ್ತಾರೆ. ಆರೋಪಿ ಹೊಳೆನರಸೀಪುರದಲ್ಲೇ ನನ್ನನ್ನು ಭೇಟಿಯಾಗಿರುತ್ತಾರೆ. ಹೊಳೆನರಸೀಪುರದಲ್ಲೇ ಆರೋಪಿ ನನ್ನನ್ನು ಭೇಟಿಯಾದ ಬಗ್ಗೆ ನನ್ನ ಫಿರ್ಯಾದಿನಲ್ಲಿ ನಮೂದು ಮಾಡಿಸಿದ್ದೇನೆ. ಆರೋಪಿ ಹೊಳೆನರಸೀಪುರದ ಪಾರ್ಕಿನ ಬಳಿ ಇರುವ ಟೀ ಅಂಗಡಿಯಲ್ಲಿ ನನ್ನನ್ನು ಭೇಟಿಯಾಗಿರುತ್ತಾರೆ. ಅವರ ಜೊತೆ ನನ್ನ ಸ್ನೇಹಿತ ಮಂಜುನಾಥನು ಬಂದಿದ್ದರು. ಮಂಜುನಾಥನ ಜೊತೆ ಆರೋಪಿ ಬಂದು ಭೇಟಿ ಮಾಡಿದರು ಎಂದು ನನ್ನ ಫಿರ್ಯಾದಿನಲ್ಲಿ ಬರೆಸಿಲ್ಲ. ಆ ರೀತಿ ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ **ಮುಂದೂಡಲಾಯಿತು.**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**